೭) ಸುಧಾರಿತ ಗುಣಮಟ್ಟದ ಎಣ್ಣೆಕಾಳು ಬಿತ್ತನೆ ಬೀಜಗಳನ್ನೊಳಗೊಂಡ ಕಿರುಚೀಲಗಳನ್ನು ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಆದ್ಯತೆ ಮೇಲೆ ಉಚಿತವಾಗಿ ವಿತರಿಸಲಾಗುವುದು.

೮) ಹಣಕಾಸಿನ ಸಂಸ್ಥೆಗಳ ಮೂಲಕ ಎಣ್ಣೆಕಾಳು ಉತ್ಪಾದನೆಗೆ ವಿಶೇಷ ಬೆಳೆಸಾಲ ಸೌಲಭ್ಯದ ವ್ಯವಸ್ಥೆ ಸಹ ಮಾಡಲಾಗಿದೆ.

ರಾಜ್ಯದಲ್ಲಿ ಮೀನು ಉತ್ಪನ್ನಗಳ ಹೆಚ್ಚಳ

೭೫೧ ಶ್ರೀ ಎಂ ನಾರಾಯಣಸ್ವಾಮಿ (ಚೇತಮಂಗಲ).—ಮಾನ್ಯ ಬಂದರು, ಮೀನುಗಾರಿಕೆ ಮತ್ತು ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕದಲ್ಲಿ ಮೀನು ಉತ್ಪನ್ನಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಮೀನುಗಾರರಿಗೆ ಹೆಚ್ಚಿನ ಉತ್ತೇಜನ ನೀಡಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮೀನು ಉತ್ಪನಗಳ ಮಾರಾಟಕ್ಕಾಗಿ ಸಹಕಾರಿ ಸಂಘಗಳನ್ನು ರಚಿಸುವ ವಿಷಯವು ಸರ್ಕಾರದವರ ಗಮನದಲ್ಲಿದೆಯೇ,

ಇ) ಹಾಗಿದ್ದಲ್ಲಿ ಯಾವಾಗ ರಚಿಸಲಾಗುವುದು ;

ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಮೀನುಗಾರರಿಗೆ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇದಕ್ಕಾಗಿ ವೆಚ್ಚವಾದ ಹಣವೆಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಮತ್ತು ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ಮೀನು ಉತ್ಪನ್ನಗಳನ್ನು ಹೆಚ್ಚಿಸಲು ಹಲವು ಯೋಜನೆಗಳನ್ನು ಕಾರ್ಯಗತ ಗೊಳಿಸಲಾಗುತ್ತಿದೆ.

೧. ಕಡಲ ಮೀನಿನ ಉತ್ಪನ್ನವನ್ನು ಹೆಚ್ಚಿಸಲು, ನಾಲ್ಕು ಮತ್ತು ಐದನೇ ಪಂಚ ವಾರ್ಷಿಕ ಯೋಜನೆಗಳ ಅವಧಿಯಲ್ಲಿ ದೋಣಿಗಳ ಯಾಂತ್ರೀಕರಣ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದ್ದು ಯಾಂತ್ರೀಕೃತ ದೋಣಿಗಳ ಸಂಖ್ಯೆ ೧೯೬೯–೭೦ನೇ ಸಾಲಿನಲ್ಲಿ ೮೦೦ ಇದ್ದು, ೧೯೮೯–೯೦ನೇ ಸಾಲಿನಲ್ಲಿ ೩,೫೦೦ ಕ್ಕೆ ಏರಿದೆ. ಮತ್ತು ಕಡಲ ಮೀನು ಉತ್ಪತ್ತಿ ೫೫,೦೦೦ ಮೆಟ್ರಿಕ್ ಟನ್‌ಗಳಿಂದ ೧,೮೫,೦೦೦ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿದೆ.

೨. ೧೯೭೦ರ ದಶಕದಲ್ಲಿ ೩೫ ನೀರಿನ ಮೀನು ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಪಶ್ಚಿಮ ಬಂಗಾಳದಿಂದ ದೊಡ್ಡಗೆಂಡೆ ಜಾತಿಯ ಮೀನು ಮರಿಗಳನ್ನು ತರಿಸಿ ಕೆರೆ ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗುತ್ತಿತ್ತು. ಮೀನು ಮರಿ ಉತ್ಪಾದನೆಯನ್ನು ರಾಜ್ಯದಲ್ಲಿ ಹೆಚ್ಚಿಸುವ ಸಲುವಾಗಿ ೮೨ ಮೀನು ಮರಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಮೀನು ಮರಿ ಉತ್ಪಾದನೆಯು ೧೦ ಕೋಟಿಯಿಂದ ೩೦ ಕೋಟಿಗೆ ಹೆಚ್ಚಿಸಿದೆ.

೩. ೫ನೇ ನೀರು ಮೀನು ಉತ್ಪನ್ನವನ್ನು ಹೆಚ್ಚಿಸುವ ಸಲುವಾಗಿ, ಮೈಸೂರು ಜಿಲ್ಲೆಯಲ್ಲಿ ಎನ್.ಸಿ.ಡಿ.ಪಿ. ನೆರವಿನ ರೂ. ೪೭೩.೮೮ ಲಕ್ಷಗಳ ವೆಚ್ಚದಲ್ಲಿ ಜಲಾಶಯ ಅಭಿವೃದ್ಧಿ ಯೋಜನೆಯನ್ನು ಆಯೋಜಿಸಲಾಗುತ್ತಿದೆ. ಯುರೋಪಿನ ಆರ್ಥಿಕ ಸಮುದಾಯ ನೆರವಿನ ೯.೦೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಶಿವಮೊಗ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

೪. ಮೀನು ಉತ್ಪಾದನೆಗೆ ಮೀನು ಮರಿಗಳು ಅವಶ್ಯವಾಗಿರುವುದರಿಂದ, ಕೇಂದ್ರ ನೆರವಿನಿಂದ ಶಿವಮೊಗ್ಗ ಜಿಲ್ಲೆಯ ಬದ್ರಾದಲ್ಲಿ ಒಂದು ಹತ್ತು ಹೆಕ್ಟೇರ್ ವಿಸ್ತೀರ್ಣದ ಮೀನು ಮರಿ ಉತ್ಪಾದನಾ ಕೇಂದ್ರವನ್ನು ೫೨.೦೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಮೀನು ಮರಿ ಕೇಂದ್ರ ಪೂರ್ಣಗೊಂಡ ನಂತರ, ಐದು ಕೋಟಿ ಮೀನು ಮರಿಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

೫. ಸಣ್ಣ ಕೆರೆ ಮತ್ತು ಕೊಳಗಳಲ್ಲಿ ಮೀನು ಕೃಷಿಕರ ಮೂಲಕ ಮೀನುಗಾರಿಕೆಯ ಅಭಿವೃದ್ಧಿಯನ್ನು ತೆಗೆದುಕೊಳ್ಳುವ ಸಲುವಾಗಿ, ರಾಜ್ಯದ ಹನ್ನೊಂದು ಜಿಲ್ಲೆಗಳಲ್ಲಿ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಮತ್ತು ಈ ಯೋಜನೆಯಡಿಯಲ್ಲಿ ೮,೮೬೩ ಹೆಕ್ಟೇರ್ ಜಲಪ್ರದೇಶದಲ್ಲಿ ೨೯.೧೮ ಲಕ್ಷ ಮೀನು ಮರಿಗಳನ್ನು ಬಿಟ್ಟು ಮೀನುಗಾರಿಕೆಗೆ ಅಳವಡಿಸಲಾಗಿದೆ.

೬. ಕರಾವಳಿಯಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸುವ ದೃಷ್ಟಿಯಿಂದ, ಉಪ್ಪು ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು ಕಾರವಾರದಲ್ಲಿ ಸ್ಥಾಪಿಸಲಾಗಿದ್ದು, ಸಂಸ್ಥೆಯು ಪ್ರತಿ ವರ್ಷ ೫೦ ಹೆಕ್ಟೇರ್ ಉಪ್ಪು ನೀರು ಪ್ರದೇಶವನ್ನು ಸೀಗಡಿ ಅಭಿವೃದ್ಧಿಗೆ ಅಳವಡಿಸುವ ಗುರಿಯನ್ನು ಹೊಂದಿದೆ. ಮತ್ತು ಸೀಗಡಿ ಮರಿ ಉತ್ಪಾದನೆಗಾಗಿ ಕುಮಟ ತಾಲ್ಲೂಕಿನ ವನ್ನಳ್ಳಿಯಲ್ಲಿ ಒಂದು ಸೀಗಡಿ ಮೀನುಮರಿ ಉತ್ಪಾದನಾ ಸಂಕೀರ್ಣವನ್ನು ಕೇಂದ್ರದ ನೆರವಿನೊಡನೆ ನಿರ್ಮಿಸಲಾಗುತ್ತಿದೆ. ಸರ್ಕಾರದ ಪಶದಲ್ಲಿರುವ ಉಪ್ಪು ನೀರು ಪ್ರದೇಶಗಳನು, ಸೀಗಡಿ ಕೃಷಿಗಾಗಿ ಮೀನುಗಾರರಿಗೆ ಗುತ್ತಿಗೆಗೆ ಕೊಡಲು ಯೋಜಿಸಲಾಗಿದೆ.

ಅ) ಮೀನುಗಾರರಿಗೆ ಹೆಚ್ಚಿನ ಉತ್ಪೇಜನ ನೀಡಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ, ರಾಜ್ಯದಲ್ಲಿ ಈಗಾಗಲೇ ೧೮೬ ಮೀನುಗಾರಿಕೆ ಪ್ರಾಥಮಿಕ ಸಹಕಾರ ಸಂಘಗಳು, ಎರಡು ಸಹಕಾರಿ ಮೀನು ಮಾರಾಟ ಮಂಡಲಿಗಳು ಎರಡು ಮೀನುಗಾರಿಕೆ ಅಭಿವೃದ್ಧಿ ನಿಗಮಗಳು ಮತ್ತು ಒಂದು ಸಹಕಾರಿ ಒಳನಾಡು ಮೀನುಗಾರಿಕೆ ಮಂಡಳಿಗಳನ್ನು ಸ್ಥಾಪಿಸಲಾಗಿದ್ದು, ಈ ಸಂಸ್ಥೆಗಳು ಮೀನುಗಾರಿಕೆ ಅಭಿವೃದ್ಧಿಪಡಿಸಿ, ಮೀನು ಉತ್ಪನ್ನಗಳ ಮಾರಾಟವನ್ನು ತೆಗೆದುಕೊಂಡಿವೆ. ಹೊಸ ಸಹಕಾರ ಸಂಘಗಳ ಅವಶ್ಯಕತೆ ಕಂಡುಬಂದಲ್ಲಿ ಮಾತ್ರ ಹೊಸ ಸಂಘಗಳನ್ನು ರಚಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರರಿಗೆ ಅನೇಕ ಸೌಲಭ್ಯವನ್ನು ಒದಗಿಸಲಾಗಿದೆ. ಮೀನುಗಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು, ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಸಾಂಪ್ರದಾಯಿಕ ದೋಣಿಗಳನ್ನು ಮೋಟಾರೀಕರಣಗೊಳಿಸಲು ಶೇಕಡ ೫೦ರಷ್ಟು ಧನ ಸಹಾಯವನ್ನು ನೀಡಲಾಗುತ್ತಿದೆ. ಅಲ್ಲದೆ, ಮೀನುಗಾರಿಕೆ ಸಲಕರಣೆಗಳ ಖರೀದಿಗಾಗಿ ಧನ ಸಹಾಯವನ್ನು ನೀಡಲಾಗುತ್ತಿದೆ. ಮೀನು ಕೃಷಿಯ ಕೊಳಗಳ ನಿರ್ಮಾಣಕ್ಕಾಗಿ ಒಂದು ಎಕರೆಗೆ ರೂ. ೧೦-೦೦-೦೦ ಗಳಂತೆ ಧನ ಸಹಾಯವನ್ನು ನೀಡಲಾಗುತ್ತಿದೆ. ಮೀನಿನ ಮಾರುಕಟ್ಟೆ ನಿರ್ಮಾಣಕ್ಕಾಗಿ ಸ್ಥಳೀಯ ಸಂಸ್ಥೆಗಳಿಗೆ ಸಹಾಯ ಧನವನ್ನು ನೀಡಿ ಮೀನುಗಾರಿಕೆಗೆ ಕೊಂಡಿ ರಸ್ತೆಗಳ ನಿರ್ಮಾಣದ ಮೂಲಕ ಮೀನುಗಾರರಿಗೆ ಹಿಡಿದ ಮೀನನ್ನು ಮಾರುಕಟ್ಟೆಗೆ ಸಾಗಿಸಲು ಅನುಕೂಲ ಮಾಡಿಕೊಡಲಾಗುತ್ತಿದೆ. ಮೀನುಗಾರರ ಸಾಮಾಜಿಕ ಸುಧಾರಣೆಗಾಗಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮೀನುಗಾರರ ಯೋಜನೆಯಡಿಯಲ್ಲಿ ಆರು ಹಳ್ಳಿಗಳ ಮೀನುಗಾರರಿಗೆ ಹಳ್ಳಿಯೊಂದಕ್ಕೆ ಒಂದು ನೂರು ಮನೆಗಳನ್ನು, ಒಂದು ಸಮುದಾಯ ಭವನವನ್ನು, ಐದು ಕೊಳವೆ ಬಾವಿ ಇತ್ಯಾದಿ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಪ್ರಕೃತಿ ವಿಕೋಪಗಳಿಗೆ ಗುರಿಯಾಗುತ್ತಿರುವ ಮೀನುಗಾರರ ಕುಟುಂಬಗಳಿಗೆ ಸಹಾಯವನ್ನೊದಗಿಸುವ ಸಲುವಾಗಿ ಮೀನುಗಾರರ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ವಿಮಾ ಸೌಲಭ್ಯವನ್ನು ೬೦,೦೦೦ ಮೀನುಗಾರರಿಗೆ ಒದಗಿಸಲಾಗಿದೆ.

ಮೇಲಿನ ವಿವಿಧ ಯೋಜನೆಗಳಿಗೆ ಹೆಚ್ಚು ಮಾಡಿದ ಹಣದ ವಿವರಗಳು ಈ ಕೆಳಗಿನಂತಿವೆ.—

ಯೋಜನೆ	ಹೆಚ್ಚು (ಲಕ್ಷ ರೂ. ಗಳಲ್ಲಿ)		
	೧೯೮೭–೮೮	೧೯೮೮–೮೯	೧೯೮೯–೯೦
೧. ಸಾಂಪ್ರದಾಯಿಕ ದೋಣಿಗಳ ಮೋಟಾರೀಕರಣಕ್ಕಾಗಿ ಸಹಾಯಧನ	೧.೮೮	೩.೭೩	೪.೪೩
೨. ಮೀನುಗಾರಿಕೆ ಸಲಕರಣೆಗಳ ಖರೀದಿಗಾಗಿ ಧನ ಸಹಾಯ (ಒಳನಾಡು)	...	೧.೫೧	೦.೮೯
೩. ಮೀನುಗಾರಿಕೆ ಸಲಕರಣೆಗಳ ಖರೀದಿಗಾಗಿ ಧನ ಸಹಾಯ (ಕರಾವಳಿ)	...	೧.೫೦	೦.೭೦
೪. ಮೀನು ಕೃಷಿ ಕೊಳಗಳ ನಿರ್ಮಾಣಕ್ಕಾಗಿ ಧನ ಸಹಾಯಂ	...	೧೦.೧೯	೨.೬೦
೫. ಮೀನು ಮಾರುಕಟ್ಟೆಗಾಗಿ ಸ್ಥಳೀಯ ಸಂಸ್ಥೆಗಳಿಗೆ ಧನ ಸಹಾಯ	೧.೧೪	೨.೩೮	೦.೪೫
೬. ಮೀನುಗಾರಿಕೆ ಕೊಂಡಿ ರಸ್ತೆಗಳ ನಿರ್ಮಾಣ	೨.೦೦	೬.೪೪	೧೧.೮೩
೭. ಮೀನುಗಾರರ ರಾಷ್ಟ್ರೀಯ ಕ್ಷೇಮಾಭಿವೃದ್ಧಿ ನಿಧಿ ಯೋಜನೆ	೪.೦೦	೩.೨೦	೧೫.೬೦
೮. ಮೀನುಗಾರರ ಸಾಮೂಹಿಕ ವಿಮಾ ಯೋಜನೆ	೫.೪೦	೫.೪೦	೬.೦೦
ಒಟ್ಟು	೧೪.೪೨	೩೪.೩೫	೪೨.೫೦

ಶಿವಮೊಗ್ಗ ಜಿಲ್ಲೆಯ ನಿವೃತ್ತ ಪೌರ ಕಾರ್ಮಿಕರ ಪೆನ್‌ಷನ್ ನೀಡುವಲ್ಲಿ ವಿಳಂಬ

೧೦೨೦. ಕರಿಯಣ್ಣ (ಹೊಳೆಹೊನ್ನೂರು).— ಮಾನ್ಯ ಬಂದರು ಮೀನುಗಾರಿಕೆ ಹಾಗೂ ನಗರಾಭಿವೃದ್ಧಿ ಸಚಿವರಂ ಈ ಕೆಳಕಂಡ ಪ್ರಶ್ನೆಗಳಿಗೆ ದಯಂಮಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ೧೯೭೨ ನೇ ಸಾಲಿನಲ್ಲಿ ನಿವೃತ್ತ ಪೌರಕಾರ್ಮಿಕರಿಗೆ ಕೊಡುತ್ತಿದ್ದ ಪೆನ್‌ಷನ್‌ನನ್ನು ೧೭ ವರ್ಷದ ನಂತರ ೧೯೮೯ನೇ ಡಿಸೆಂಬರ್‌ನಿಂದ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ಪೆನ್‌ಷನ್ ಏಕಾಏಕಿ ನಿಲ್ಲಿಸಿರುವುದರಿಂದ ಪೌರಕಾರ್ಮಿಕರಿಗೆ ಆಘಾತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಳ್ಳಲಾದ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು).—

ಅ) ಹೌದು. ನಿಯಮಗಳಿಗೆ ವಿರುದ್ಧವಾಗಿ ಪಿಂಚಣಿ ಸೌಲಭ್ಯಗಳನ್ನು ಅನರ್ಹತೆಯ ಅರ್ಥಪಡಿಸಲಾಗಿದ್ದು ಪ್ರಕರಣಗಳಲ್ಲಿ ಪಿಂಚಣಿಯನ್ನು ನಿಲ್ಲಿಸಲಾಗಿರುತ್ತದೆ.

ಆ) ಪಿಂಚಣಿಯನ್ನು ನಿಲ್ಲಿಸಿದ ನಂತರ ಪಿಂಚಣಿ ನಿಂತುಹೋದ ಬಗ್ಗೆ ಸಂಬಂಧಿಸಿದ ನಿವೃತ್ತ ಪೌರಕಾರ್ಮಿಕರು ಸರ್ಕಾರಕ್ಕೆ ನಿವೇದಿಸಿಕೊಂಡಿರುತ್ತಾರೆ.

ಇ) ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.